# Vidyavardhaka Sangha®

# Vidyavardhaka First Grade College

# Sheshadri Iyer Road, Mysore









# 27-07-2023

# KARGIL VIJAY DIWAS CELEBRATION

## ಕಾರ್ಗಿಲ್ ವಿಜಯ್ ದಿವಸ್ ಆಚರಣೆ

1990ರ ಮೇ ತಿಂಗಳಿನಿಂದ ಪಾಕಿಸ್ತಾನದ ವಿರುದ್ಧ 70 ದಿನಗಳ ಸುದೀರ್ಘವಾಗಿ ಹೋರಾಡಿದ ಭಾರತದ ಯೋಧರು ಅಂತಿಮವಾಗಿ 1999ರ ಜುಲೈ 26ರಂದು ಆಪರೇಷನ್ ವಿಜಯ್ ಯಶಸ್ವಿ ಎಂದು ಘೋಷಿಸಿದರು. ಅಂದಿನಿಂದ ಕಾರ್ಗಿಲ್ ವಿಜಯೋತ್ಸವ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ತಿಳಿಸಿದರು.

ದಿನಾಂಕ:26.07.2023ರಂದು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜಿನ ಎನ್.ಸಿ.ಸಿ ಘಟಕ, ಎನ್.ಎಸ್.ಎಸ್ ಘಟಕ, ರೆಡ್‌ಕ್ರಾಸ್ ಘಟಕ ಹಾಗೂ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕಗಳ ಸಹಯೋಗದಲ್ಲಿ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದ ಡಾ.ಎಸ್.ಮರೀಗೌಡರವರು ಅಂದು ಭಾರತೀಯ ಸೈನ್ಯದ 527 ಮಂದಿ ವೀರ ಯೋಧರು ಮಾಡಿದ ಬಲಿದಾನದಿಂದಾಗಿ ಇಂದು ನಾವು ವಿಜಯ್ ದಿವಸ್ ಆಚರಿಸುತ್ತಿದ್ದೇವೆ. ಅವರ ಬಲಿದಾನವು ಇಂದಿನ ಹಾಗೂ ಮುಂದಿನ ಪೀಳಿಗೆಗೆ ಆದರ್ಶ ಹಾಗೂ ಮಾರ್ಗದರ್ಶನವಾಗಿರಬೇಕು. ಕೇವಲ ಸೌಲಭ್ಯಗಳಿಗೋಸ್ಕರ ಯೋಧರಾಗುವವರು ಯಾರೂ ಇಲ್ಲ ಸೇವಾ ಮನೋಭಾವ ಹಾಗೂ ದೇಶಭಕ್ತಿ ಹೊಂದಿರುವವರು ಮಾತ್ರ ಯೋಧರಾಗುತ್ತಾರೆ. ಜೀವದ ಹಂಗನ್ನು ತೊರೆದು ಕುಟುಂಬಗಳಿಂದ ದೂರವಾಗಿ ದೇಶಕ್ಕಾಗಿ ಆತ್ಮಾರ್ಪಣೆಯನ್ನು ಮಾಡಿಕೊಳ್ಳುವ ಯೋಧನಾಗಬೇಕಾದರೇ ಅವನಿಗೆ ಗುಂಡಿಗೆಯಿರಬೇಕಾಗುತ್ತದೆ. ಧೈರ್ಯವಂತರಿಗೆ ಮಾತ್ರ ವೀರ ಯೋಧರಾಗಲು ಸಾಧ್ಯ ಎಂದು ಯೋಧರನ್ನು ಸ್ಮರಿಸಿದರು.

ಕಾಲೇಜಿನ ಎನ್.ಸಿ.ಸಿ ಘಟಕ, ಎನ್.ಎಸ್.ಎಸ್ ಘಟಕ, ರೆಡ್‌ಕ್ರಾಸ್ ಘಟಕ ಹಾಗೂ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಘಟಕಗಳ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾಯಕ್ರಮವನ್ನು ಡಾ॥ಪಿ.ಕೆ.ಗೋವರ್ಧನ್ ನಿರೂಪಿಸಿ, ಅಧ್ಯಾಪಕ ಸಲಹೆಗಾರರಾದ ಪ್ರೊ.ಸತೀಶ್‌ಟಿ. ವಂದಿಸಿದರು.


ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.








ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
ಕಾರ್ಗಿಲ್ ವಿಜಯ ದಿವಸ ಆಚರಣೆ
೨೦೨೩













